ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿರುವ ಮಲೆ ಕುಡಿಯ ಜನಾಂಗದವರಿಗೆ ಕೃಷಿ ಭೂಮಿ ಮಂಜೂರಾತಿ

1299 (1523) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುದುರೆಮುಖ ರಾಷ್ಟ್ರೀಯ ಉದ್ಯಾನದ ವಿಸ್ತೀರ್ಣ ಎಷ್ಟು?

ಆ) ಆ ಪ್ರದೇಶದಲ್ಲಿ ತಲೆತಲಾಂತರಗಳಿಂದ ವಾಸವಾಗಿರುವ ಮಲೆಕುಡಿಯ (ಪರಿಶಿಷ್ಟ ಜನಾಂಗ) ದವರ ಸಂಖ್ಯೆ ಎಷ್ಟು?

ಇ) ಇವರಿಂದ ಸಂತ್ರಸ್ತರಾದ ಕೃಷಿಕರ ಸಂಖ್ಯೆ ಎಷ್ಟು? ಅವರುಗಳನ್ನು ನಿಗಧಿತ ಪ್ರದೇಶದಿಂದ ಒಕ್ಕಲೆಬ್ಬಿಸುವ ಯೋಜನೆ ಸರ್ಕಾರಕ್ಕಿದೆಯೇ? ಹಾಗಿದ್ದಲ್ಲಿ ಅದರ ವಿವರಗಳೇನು?

ಈ) ಮಲೆಕುಡಿಯರು ಮೂಲತಃ ಅರಣ್ಯ ಪ್ರದೇಶದ ಕೃಷಿಕರಾಗಿದ್ದು ಅವರನ್ನು ಅಲ್ಲಿಯೇ ಉಳಿಸಿಕೊಂಡು ಉದ್ಯಾನವನವನ್ನು ರಕ್ಷಿಸಿಕೊಳ್ಳುವ ಕೆಲಸವನ್ನು ಸರ್ಕಾರ ಮಾಡಲು ಯೋಚಿಸಿದೆಯೇ?

ಕೆ.ಎಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) 60032.318 ಹೆಕ್ಟೇರು

ಆ) ಜನರ ಸಂಖ್ಯೆ 2503 (438 ಕುಟುಂಬಗಳು)

ಇ) ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ವಾಸ್ತವ್ಯವಿರುವ ಸಂತ್ರಸ್ತ ಕೃಷಿಕರು ಇರುವುದಿಲ್ಲ.

ಈ) ಇದರ ವಾಸ್ತವ್ಯದ ಹಕ್ಕನ್ನು ಕಂದಾಯ ಇಲಾಖೆಯಿಂದ ನಿರ್ಧರಿಸಲಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಧಾರಣ ಸಾಮರ್ಥ್ಯ ಅಧ್ಯಯನ

1300(1521) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಹೊಸ ಬೃಹತ್ ಕೈಗಾರಿಕೆಗಳನ್ನು ಪ್ರಾರಂಭಿಸಲು ಧಾರಣಾ ಸಾಮರ್ಥ್ಯ ಅಧ್ಯಯನ ಕಾರ್ಯವನ್ನು ಸರ್ಕಾರವು ಮಾಡಿದೆಯೇ?

ಆ) ಹಾಗಿದ್ದಲ್ಲಿ ವಿವರಗಳೇನು?

ಇ) ಆ ಪ್ರದೇಶದಲ್ಲಿ ಪ್ರಾರಂಭಿಸಲುದ್ದೇಶಿಸಲಾದ ಹೊಸ ಕೈಗಾರಿಕೆಗಳು ಧಾರಣಾ ಸಾಮರ್ಥ್ಯ ಅಧ್ಯಯನದ ವಿಚಾರಗಳಿಗೆ ಪೂರಕವಾಗಿವೆಯೆ: ಅದನ್ನನುಸರಿಯೇ ಯೋಜನೆಗಳನ್ನು ಹಾಗೂ ಉದ್ದಿಮೆಗಳನ್ನು ಪ್ರಾರಂಭಿಸಲಾಗುತ್ತಿದೆಯೇ: ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರದ ದೃಢ ನಿಲುವೇನು?